**CC. NO. 1056/2025**
**<u>ಪಿಡಬ್ಲ್ಯೂಃ 1</u>**

ದಿನಾಂಕಃ **27-03-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ. ಬಿ. ಎ ವಕೀಲರಿಂದಃ</u>

1. ನನಗೆ ಆರೋಪಿಯ ಪರಿಚಯವಿದೆ. ನನ್ನ ಮದುವೆಯಾದ ನಂತರದಿಂದ ನನಗೆ ಆರೋಪಿಯ ಪರಿಚಯವಿರುತ್ತದೆ. ಅವರ ಕುಟುಂಬ ಸದಸ್ಯರಾದ ಪ್ರೇಮ್ಲಾಬಾಯಿ, ಪ್ರಕಾಶ ಗೌಡ ಹಾಗೂ ಮಲ್ಲನಗೌಡರವರ ಪರಿಚಯ ನನಗೆ ಇಲ್ಲ. ನಿವೇಶನ ಯೋಜನೆಯನ್ನು ಯಾರು-ಯಾರು ಸೇರಿ ರೂಪಿಸಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ, ನನ್ನ ಗಂಡ ಹೇಳಿದ್ದರಿಂದ ನಾನು ಹಾಗೂ ನನ್ನ ಕುಟುಂಬ ಸದಸ್ಯರು ಸದರಿ ಯೋಜನೆಯಲ್ಲಿ ಹಣ ಹೂಡಿಕೆ ಮಾಡಿದ್ದೇವು ಎಂದು ನುಡಿಯುತ್ತಾರೆ. ಆರೋಪಿ ನನ್ನ ಗಂಡನಿಂದ ರೂ. 5 ಲಕ್ಷ ಕೈಗಡ ಸಾಲ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲದ ವ್ಯವಹಾರಕ್ಕೆ ಸಂಬಂದಿಸಿದಂತೆ ಆರೋಪಿ ನಿಮ್ಮ ಗಂಡನಿಗೆ ಚೆಕ್ಕ ನೀಡಿದ್ದರು ಎಂದರೆ ಸಾಕ್ಷಿ ನನ್ನ ಗಂಡ, ತಂಗಿ, ಮಗಳು ಹಾಗೂ ಅಳಿಯ ಎಲ್ಲರೂ ಹೋದಾಗ ಆರೋಪಿ ಚೆಕ್ಕಗಳನ್ನು ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿ ರೂ. 5 ಲಕ್ಷ ಸಾಲದ ಹಣವನ್ನು ಬ್ಯಾಂಕ ಖಾತಾ ವರ್ಗಾವಣೆ ಮೂಲಕ ನನ್ನ ಗಂಡನಿಗೆ ಮರು ಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಚೆಕ್ಕಗಳನ್ನು ಮರಳಿ ಕೊಡುವಂತೆ ಕೇಳಿದಾಗ ನಿಮ್ಮ ಗಂಡ ಚೆಕ್ಕಗಳನ್ನು ಮರಳಿ ಕೊಟ್ಟಿಲ್ಲ ಎಂದರೆ ಸಾಕ್ಷಿ ಸಾಲದ ವ್ಯವಹಾರಕ್ಕೆ ಚೆಕ್ಕ ನೀಡಿಲ್ಲ, ನಿವೇಶನ ಯೋಜನೆಯ ಹಣ ಮರುಪಾವತಿಗೆ ಚೆಕ್ಕ ನೀಡಿದ್ದರು ಎಂದು ನುಡಿಯುತ್ತಾರೆ. ಯಾವ ಸರ್ವೆ ನಂಬರಗಳಲ್ಲಿ ನೀವಶನ ನಿರ್ಮಾಣ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. ನನ್ನ ಗಂಡನ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ನಿವೇಶನ ಯೋಜನೆ ರೂಪಿಸಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ